ನೀನಂತೂ ಹುಟ್ಟಾ ಕಲಾವಿದ. ಎರಡೇ ನಿಮಿಷದಲ್ಲಿ ಕಲಿಯದಿದ್ದರೆ ಕೇಳು. ನಾನು ಹೋಗಿ ಸೂಜಿಗಳನ್ನು ಮತ್ತು ಬಣ್ಣಗಳನ್ನು ತರುತ್ತೇನೆ. ನೀನು ಬಳಸುವ ಬಣ್ಣಗಳಿಗಿಂತ ಹೆಚ್ಚಿನ ಬಣ್ಣಗಳು ನನ್ನ ಬಳಿ ಇವೆ."

"ಸಾಧ್ಯವೇ ಇಲ್ಲ!" ಹುಡುಗನ ಮುಖ ಕೆಂಪಗಾಯಿತು.

"ನನ್ನಲ್ಲಿರುವ ಬಣ್ಣಗಳ ಬಗ್ಗೆ ಅವನಿಗೆ ನೀನೇ ಹೇಳೇ ಜೋಸಿ..." ಡ್ರಿಯೋಲಿ ಹೆಂಡತಿಯ ಕಡೆಗೆ ತಿರುಗಿದ.

"ಡ್ರಿಯೋಲಿ ಹೇಳುತ್ತಿರುವುದು ಸುಳ್ಳಲ್ಲ ಕಣೋ..ಸೂಟಿನ್."

ಅವನ ತೋಳು ಟ್ಯಾಟು ಚಿತ್ರಗಳಿಂದ ತುಂಬಿ ಹೋಗಿತ್ತಾದರೂ ಒಂದು ಖಾಲಿ ಜಾಗವನ್ನು ಹುಡುಕಿ ತೆಗೆದು, "ನಾನೀಗ ನನ್ನ ನೆಚ್ಚಿನ ನೀಲಿಬಣ್ಣದ ಶಾಯಿಯನ್ನು ತೆಗೆದುಕೊಳ್ಳುತ್ತೇನೆ. ಸೂಜಿಯನ್ನು ಶಾಯಿಯಲ್ಲಿ ಅದ್ದಿ ಈ ಮಶೀನಿನ ಹಿಡಿಯ ಕೆಳಗೆ ಇರುವ ಗುಂಡಿಯನ್ನು ಒತ್ತಿ ಮೆಲ್ಲಗೆ ನನ್ನ ಚರ್ಮದ ಮೇಲೆ ಚಿತ್ರ ಬಿಡಿಸುತ್ತೇನೆ. ನೋಡು ಹೀಗೆ..."

ಹುಡುಗ ಕುತೂಹಲದಿಂದ ಗಮನಿಸುತ್ತಿದ್ದವನು ಉತ್ತೇಜಿತನಾದ.

"ನಿನ್ನ ಕೈ ಮೇಲೆ ನಾನೂ ಕೊಂಚ ಅಭ್ಯಾಸ ಮಾಡಲಾ?" ಎಂದು ಕೇಳಿದಾಗ ಡ್ರಿಯೋಲಿ ಅವನ ಮುಂದೆ ಕೈಯನ್ನೊಡ್ಡಿದ.

ಹುಡುಗ ಡ್ರಿಯೋಲಿಯ ಕೈಯ ಮೇಲೆ ಟ್ಯಾಟೂ ಮಶೀನನ್ನು ಆಡಿಸಿದ.

"ನೋಡು ಎಷ್ಟೊಂದು ಸುಲಭ. ನೀನು ಈಗ ಬ್ರಶ್ಶಿನ ಬದಲು ಸೂಜಿ ಬಳಸುತ್ತೀಯ, ಅಷ್ಟೇ. ಶುರು ಮಾಡೋಣವಾ?" ಎಂದ ಡ್ರಿಯೋಲಿ.

"ರೈಟ್!" ಎಂದ ಹುಡುಗ.

"ಎಲ್ಲಿದ್ದೀಯೇ ಜೋಸಿ?" ಡ್ರಿಯೋಲಿ ಅರಚಿದ.

ಜೋಸಿ, ಕನ್ನಡಿಯಿಂದ ದೂರ ನಿಂತು ತಲೆ ಬಾಚುತ್ತಿದ್ದಳು.

"ಜೋಸಿ, ಹಾಗೆಯೇ ತಲೆ ಬಾಚುವ ಭಂಗಿಯಲ್ಲೇ ನಿಲ್ಲಲಿ. ಹಾಗೇ ಬಿಡಿಸುತ್ತೇನೆ."

"ನೀನು ನಿಜವಾಗಿಯೂ ಜೀನಿಯಸ್ ಕಣೋ!"

ಜೋಸಿ, ಕೈಯಲ್ಲಿ ದ್ರಾಕ್ಷಾಮದ್ಯದ ಗ್ಲಾಸನ್ನು ಹಿಡಿದುಕೊಂಡೇ ಡ್ರೆಸ್ಸಿಂಗ್ ಟೇಬಲಿನ ಬಳಿ ಹೋಗಿ ನಿಂತಳು.

ಡ್ರಿಯೋಲಿ ಪ್ಯಾಂಟು, ಶರಟನ್ನು ಕಳಚಿ ಒಳಚಡ್ಡಿಯಲ್ಲಿ ಕುಳಿತುಕೊಂಡ. ಅವನ ಕೃಶವಾದರೂ ಗಟ್ಟಿಮುಟ್ಟಾದ ಬೆನ್ನು ಹುಡುಗನ ಮುಂದಿತ್ತು.

"ನನ್ನ ಬೆನ್ನು ಈಗ ನಿನ್ನ ಕ್ಯಾನ್ವಾಸ್ ಮಗಾ! ಹೇಗೆ ಬೇಕು ಹಾಗೆ ಉಪಯೋಗಿಸಬಹುದು." ಎಂದ.

"ನಿನ್ನ ಬೆನ್ನನ್ನು ನನ್ನ ಡ್ರಾಯಿಂಗ್ ಸ್ಟ್ಯಾಂಡಿನ ಮೇಲೆ ಸಿಕ್ಕಿಸಬೇಕು!" ಹುಡುಗ ಹೇಳಿದ.

"ಅದೇಗೆ ಸಾಧ್ಯ?"

"ನೀನು ಕ್ಯಾನ್ವಾಸ್ ಹೌದೋ ಅಲ್ವೋ?"

"ನಾನೀಗ ಒಂದು ಕ್ಯಾನ್ವಾಸೇ..."

"ನೀನು ಈಗ ಆ ಕುರ್ಚಿಯಲ್ಲಿ ನನ್ನ ಕಡೆಗೆ ಬೆನ್ನು ತಿರುಗಿಸಿ ಕುಳಿತುಕೋ. ಶುರು ಮಾಡೇಬಿಡೋಣ."

"ನಾನು ರೆಡಿ."

"ನಾನು ಪೇಂಟ್ ಮಾಡಿದ ಚಿತ್ರ ನನಗೆ ಇಷ್ಟವಾದರೆ ಮಾತ್ರ ನಾನು ಟ್ಯಾಟೂ ಮಾಡುತ್ತೇನೆ, ಇಲ್ಲವಾದರೆ ಇಲ್ಲ." ಹುಡುಗ ಹೇಳುತ್ತಾ ಡ್ರಿಯೋಲಿಯ ಬೆನ್ನ ಮೇಲೆ ಬ್ರಶ್ ಆಡಿಸತೊಡಗಿದ.

"ಹೇ, ಹೇ... ಬೆನ್ನಿನ ಮೇಲೆ ಹಲ್ಲಿ ಓಡಾಡಿದಂತಾಗುತ್ತಿದೆ!..."